ಅತಿಕ್ರಮ ಪ್ರವೇಶವನ್ನು ವಿರೋಧಿಸಲು ಪ್ರಯತ್ನಿಸಿದರೂ ನಾಯಿಯ ಯಜಮಾನರಾದ ಜೋಯಿಸರು ಜೊತೆಯಲ್ಲೇ ಇದ್ದುದರಿಂದ ಅಂತಹ ಯಾವುದೇ ಕ್ರಾಸ್‌ವಾರ್‌ಗಳು ನಡೆಯದೆ ಕೋಲ್ಡ್‌ವಾರ್‌ಗಳು ಮಾತ್ರ ಕೇವಲ ನಾಯಿಗಳ ಲೋಕದೊಳಗೇ ನಡೆದು ಮಾನವಲೋಕದ ಅರಿವಿಗೆ ಬರುತ್ತಿರಲಿಲ್ಲ.

ಇಷ್ಟು ಕಾಲ ನಡೆದ ಈ ಏಕಮುಖ ಜಗಳಕ್ಕೆ ಸಾಕ್ಷಿಯಾಗಲು ಅದಕ್ಕಿದ್ದ ಇನ್ನೊಂದು ಬಲವಾದ ಕಾರಣವೇನೆಂದರೆ ಸಿದ್ರಾಮಕ್ಕ ಒಲೆಯ ಮೇಲೆ ಕುದಿಯಲು ಇಟ್ಟಿದ್ದ ಉಳಿಕೆ ಕೋಳಿಸಾರಿನ ವಾಸನೆ. ಅದರ ಪರಿಮಳ ಮಾತ್ರದಿಂದಲೇ 'ಚಿತ್ತಾಗಿ' ಕುಳಿತಿದ್ದ ಆ ನಾಯಿಗೆ ಜೋಯಿಸರ ಮನೆಯ ಉಳಿಕೆ ಅನ್ನ, ಹುಳಿ ಸಾರು ಮುಂತಾದುವು ಈ ಪರಿಮಳದ ಮುಂದೆ ಏನೇನೂ ಅಲ್ಲವೆನ್ನಿಸತೊಡಗಿ ಜಗಳ ಮುಂದುವರಿಯಲಿ ಎಂದು ಆಶಿಸತೊಡಗಿತ್ತು. ಆದರೆ ಅದರ ನಿರೀಕ್ಷೆ ಹುಸಿಯಾಗಿ, ಜೋಯಿಸರು ಮದುವೆ ಲಗ್ನ ಕಟ್ಟಿಸಲು ಹುಡುಕಿಕೊಂಡು ಬಂದವರೊಡನೆ ಎಲ್ಲ ಬಿಟ್ಟು ಹೋಗಬೇಕಾಗಿ ಬಂದುದರಿಂದ ಜಗಳ ಏಕ್‌ದಂ ನಿಕಾಲಿಯಾಗಿಬಿಟ್ಟಿತು. ನಾಯಿಮಾತ್ರ ಎಳೆದುಕೊಳ್ಳುತ್ತಿದ್ದ ಉಸಿರನ್ನು ಹೊರಕ್ಕೆ ಬಿಡಲಾಗದೆ ಧ್ಯಾನಾಸಕ್ತವಾಯಿತು.

ಗಂಡಸರ ನಡುವೆ ಈ ಜಗಳ ನಡೆಯುವ ಹೊತ್ತಿನಲ್ಲಿ ಸಿದ್ರಾಮಕ್ಕನ ಜಗತ್ತಿನಲ್ಲಿ ಬೇರೆಯದೇ ಆದ ಚಟುವಟಿಕೆಗಳು ನಡೆಯುತ್ತಿದ್ದವು. ಹತ್ತಿರಕ್ಕೆ ಬಂದಿದ್ದ, ಮಾರ್ನೌಮಿಗೆ ತಯಾರಿ ಮುಗಿಯದೇ ಸಿದ್ರಾಮಕ್ಕನಿಗೆ ತಳಮಳಕ್ಕಿಟ್ಟುಕೊಂಡಿತ್ತು. ಮನೆಯ ಹೊರಮುಖದ ಗೋಡೆಯನ್ನು ನೊರೆದು, ಬಗ್ಗಡ ಬಳಿದು, ಸುಣ್ಣದ ನೀರನ್ನು ಚಿಮುಕಿಸಿದ್ದರೂ, ಒಳಗಿನ ಕೆಲಸ ಮುಗಿದಿರಲಿಲ್ಲ. ಇವತ್ತಂತೂ ನೆಲ ಸಾರಿಸಿ ನೆಲಕ್ಕೆ ಅಕ್ಕಿ ರಂಗೋಲಿ ಬಿಡಿಸಲು ಕೆಂಚಕ್ಕನನ್ನು ಕರೆದುಕೊಂಡು ಬಂದಿದ್ದಳು. ಕೆಂಚಕ್ಕ ರಂಗೋಲಿಯಲ್ಲಿ ಎತ್ತಿದ ಕೈ. ಸಿದ್ರಾಮಕ್ಕ ಕೆಂಚಕ್ಕನನ್ನು ರಂಗೋಲಿ ಮಟ್ಟಿಗೆ ಗುರುವೆಂದೇ ಅಂದುಕೊಂಡಿದ್ದಳು. ಕೆಂಚಕ್ಕನಿಂದ ಹತ್ತಾರು ರಂಗೋಲಿಗಳನ್ನು ಕಲಿತು ದಿನ ನಿತ್ಯ ಬಿಡುತ್ತಿದ್ದಳು. ಮನೆ ಮುಂದಿನ ಅಂಗಳವನ್ನು ಅದಕ್ಕೆಂದೇ ಸುದ್ಧಗೊಳಿಸಿ ಎರಡೆರಡು ದಿನಕ್ಕೂ ಸಗಣಿ ಸಾರಿಸುತ್ತಿದ್ದಳು. ಅವಳು ಆ ಅಂಗಳದ ಉದ್ದಗಲಕ್ಕೂ ಹಾಕುತ್ತಿದ್ದ ನಾಗಮಂಡಲ, ಕೃಷ್ಣನ ತೊಟ್ಟಿಲು, ಸರ್ಪತೇರಿನ ರಂಗೋಲಿಗಳನ್ನು ಹೋಗಬರುವವರು ಚಣ ನಿಂತು ನೋಡಿ ಹೋಗುತ್ತಿದ್ದರು. ಕೆಲವರು ನೋಡದೆ ಅದರ ಮೇಲೆಯೇ ನಡೆದು ಹೋಗಿಬಿಡುತ್ತಿದ್ದರು. ಆಗೆಲ್ಲ ಸಿದ್ರಾಮಕ್ಕನಿಗೆ ಯಾರೋ ತನ್ನ ಮೇಲೇ ನಡೆದುಹೋಗುತ್ತಿದ್ದಾರೆ ಅನ್ನಿಸುತ್ತಿತ್ತು.

ಕೆಂಚಕ್ಕ ರಂಗೋಲಿಯಲ್ಲಿ ಎತ್ತಿದ ಕೈ ಅಂದೆನಲ್ಲವೆ? ಇವತ್ತು ಕೆಂಚಕ್ಕ ಬಿಡಿಸಿದ ರಂಗೋಲಿ ಕೃಷ್ಣನ ತೇರನ್ನು ಮನೆಯೊಳಕ್ಕೆ ತಂದಂಗಿತ್ತು. ಎಳೆದರೆ ಮುಂದಕ್ಕೆ ಬರುತ್ತದೆ ಎನ್ನಿಸುತ್ತಿತ್ತು. ಕೆಂಚಕ್ಕನ ಭಂಡಾರದಲ್ಲಿ ಗೋಡೆ ಮೇಲೆ ಬಿಡುವ ರಂಗೋಲಿಗಳೂ ಇದ್ದವು. ಗೋಡೆಯಲ್ಲೇ ಅದ್ದಿಸಿದ್ದ ಕನ್ನಡಿಯನ್ನು ನಡುಮಧ್ಯಕ್ಕೆ ಬಿಟ್ಟುಕೊಂಡು ತೇರು ಬರೆದು ಆ ಕಡೆ ಈ ಕಡೆ ಸೂರ್ಯ ಚಂದ್ರರನ್ನು ಬರೆದರೆ ಗೋಡೆಗೊಂಡು ಐಸಿರಿ ಬಂದಂಗಾಗುತ್ತಿತ್ತು.

ನುಣ್ಣಗಿನ ಹಸುವಿನ ಸಗಣಿಯಿಂದ ನಡುಮನೆ ಮತ್ತು ಕೋಣೆಯನ್ನು ಸಾರಿಸಿದ ಸಿದ್ರಾಮಕ್ಕ, ನೆಲ ಆರುವುದರೊಳಗೆ ಕೆಂಚಕ್ಕನ ಕೈಯಿಂದ ಅಕ್ಕಿ ರಂಗೋಲಿ ಬಿಡಿಸಿಸಿದಳು. ರಂಗೋಲಿಗಳು ಮೂಡುತ್ತಿರುವ ಅಂದವನ್ನು ಎದೆಯಲ್ಲಿ ತುಂಬಿಸಿಕೊಂಡ ಸಿದ್ರಾಮಕ್ಕ ಕೆಂಚಕ್ಕನನ್ನು ಕಳಿಸಿಬರಲು ಜೊತೆಯಲ್ಲೇ ಹೋದಳು. ಸ್ವಲ್ಪ ಹೊತ್ತಿನಲ್ಲೇ ವಾಪಸ್ಸಾದಾಗ ತೆರೆದ ಬಾಗಿಲು ತೆರೆದ ಹಾಗೆಯೇ ಇರುವುದನ್ನು ಕಂಡು ಅವಳಿಗೆ ಗಂಡನ ಮೇಲೆ ಸಿಟ್ಟು ಬಂತು. ಸುತ್ತ ಎತ್ತ ನೋಡಿದರೂ ಅವನು ಕಾಣಿಸಲಿಲ್ಲ. ನಡುಮನೆಯಲ್ಲಿ ಕೆಂಚಕ್ಕ ಬಿಟ್ಟಿದ್ದ ರಂಗೋಲಿ ಅರಳಿ ನಿಂತಿದ್ದವು. ಸುತ್ತ ಕಣ್ಣು ಹಾಯಿಸುವಷ್ಟರಲ್ಲಿ ಕೋಣೆಯ ಒಳಗಡೆ ದಢಕ್ಕೆಂದು ಏನೋ ಸದ್ದಾಯಿತು. ಕೆಟ್ಟದ್ದನ್ನೇನೋ